KACM010000612021

Presented on : 11-01-2021
Registered on : 11-01-2021

**IN THE COURT OF**
**PRL. DISTRICT AND SESSIONS JUDGE.CHIKMAGALUR**
**AT Chikmagalur,CHIKMAGALUR**
**(Presided Over by SHUBHA GOWDAR)**
**SC/2/2021**

Complainant(PROSECUTION):
State by Jayapura Police, Rept. by The Public Prosecutor, Chikkamagaluru.

**VERSUS**

Accused:
Sreeraj @ Annaiah S/o Dharmaiah, 26yrs, Coolie, R/o Matadagadde, Hedse Vlg., Koppa Taluk.

----------------------------------------------------------------------------

State Complainant}: The Public Prosecutor, Chikkamagaluru.,
Advocate for I.S. THEJASVI appearing for Sreeraj @ Annaiah

----------------------------------------------------------------------------

**Offence punishable under : SEC.314. of INDIAN PENAL CODE,**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ಚಿಕ್ಕಮಗಳೂರು**

**S.C. No: 02/2021**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಡಾ.ಬಾಲಕೃಷ್ಣ | ಪ್ರಾ.ಸಾ.- 09 |
| ತಂದೆಯ ಹೆಸರು | : | ಲೇ ಶ್ರೀನಿವಾಸ | ಚಾ.ಸಾ.- 16 |
| ವಯಸ್ಸು | : | 57 ವರ್ಷ | |
| ಉದ್ಯೋಗ | : | ಪ್ರಸೂತಿ ತಜ್ಞರು, ಸಾರ್ವಜನಿಕ ಆಸ್ಪತ್ರೆ ಶೃಂಗೇರಿ | |
| ವಾಸ ಸ್ಥಳ | : | ಶೃಂಗೇರಿ | |

**ದಿನಾಂಕಃ 21-02-2023**

**ಪ್ರಮಾಣ ವಚನ ಬೋಧಿಸಲಾಯಿತು.**

**ಃ ಮುಖ್ಯ ವಿಚಾರಣೆಃ ಮಾನ್ಯ ಪಿ.ಪಿ. ಯವರಿಂದಃ**

1. ನಾನು 2015 ನೇ ಇಸವಿ ಫೆಬ್ರವರಿ ತಿಂಗಳಿನಿಂದ 2020 ರ ನವೆಂಬರ್ ತಿಂಗಳಿನವರೆಗೂ ನಾನು ಕೊಪ್ಪದ ಎಂ.ಎಸ್.ಡಿ.ಎಂ ಸಾರ್ವಜನಿಕ ಆಸ್ಪತ್ರೆಯಲ್ಲಿ ಸ್ತ್ರೀರೋಗ ತಜ್ಞರು ಎಂದು ಕೆಲಸ ಮಾಡುತ್ತಿದ್ದೆನು.

2. ದಿಃ 16.02.2019 ರಂದು ಬೆಳಿಗ್ಗೆ 9.00 ಗಂಟೆಗೆ ನಾನು ನನ್ನ ಕರ್ತವ್ಯಕ್ಕೆ ಹಾಜರಾದೆನು. ನಾಗರತ್ನ ಎನ್ನುವವರು ಆಸ್ಪತ್ರೆಗೆ ದಾಖಲಾಗಿದ್ದರು. ಅವರ ಕಡೆಯವರು ನನ್ನ ಬಳಿಗೆ ಒಂದು ಸ್ಕ್ಯಾನಿಂಗ್ ರಿಪೋರ್ಟನ್ನು ತಂದರು. ಹೊಟ್ಟೆ ನೋವು ಮತ್ತು ರಕ್ತ ಸ್ರಾವವಾಗುತ್ತಿದೆ ಎಂದು ನಾಗರತ್ನ ಇವರನ್ನು ದಾಖಲು ಮಾಡಲಾಗಿದೆ ಎಂದು ಹೇಳಿದರು. ನಾಗರತ್ನ ಅವರ ತಂದೆ ಮತ್ತು ಮತ್ತೊಬ್ಬ ಮಹಿಳೆ ನನ್ನ ಬಳಿ ಬಂದದ್ದು.

3. ಅವರು ತಂದ ಸ್ಕ್ಯಾನಿಂಗ್ ರಿಪೋರ್ಟ ಪ್ರಕಾರ ನಾಗರತ್ನ ಇವರು, ಮೂರು ತಿಂಗಳ ಗರ್ಭಿಣಿ ಎಂದು ಗರ್ಭಪಾತ ಆಗುತ್ತಿದೆ ಎಂದು ಕಂಡುಬಂತು. ನಾನು ಇತಿಹಾಸದ ಬಗ್ಗೆ ನಾಗರತ್ನ ಅವರ ತಂದೆಯನ್ನು ವಿಚಾರಿಸಿದಾಗ ನಾಗರತ್ನ ಇವರು ಪ್ರೀತಿ ಮಾಡುತ್ತಿದ್ದರು, ಹುಡುಗನ ಹೆಸರನ್ನೇನು ಹೇಳಲಿಲ್ಲ, ಆತನೊಂದಿಗೆ ಲೈಂಗಿಕ ಸಂಪರ್ಕ ಇಟ್ಟುಕೊಂಡಿದ್ದಳು ಎಂದು, ಇದರಿಂದ ಗರ್ಭಿಣಿ ಆಗಿದ್ದಳೆಂದು ಹೇಳಿದರು. ಮೂರು ದಿನಗಳ ಹಿಂದೆ ಆ ಹುಡುಗ ಯಾವುದೋ ಮಾತ್ರೆಗಳನ್ನು ನಾಗರತ್ನ ಇವರಿಗೆ ತಂದುಕೊಟ್ಟಿದನು ಎಂದು, ಅದನ್ನು ಆಕೆ ನುಂಗಿದ್ದಳು ಎಂದು, ತದನಂತರ ಹೊಟ್ಟೆನೋವು ಮತ್ತು ರಕ್ತಸ್ರಾವ ಪ್ರಾರಂಭವಾಯಿತು ಎಂದು, ಜಯಪುರದ ಸಾರ್ವಜನಿಕ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆವು ಎಂದು, ಆ ಆಸ್ಪತ್ರೆಯಲ್ಲಿ ಸರಿಯಾದ ವ್ಯವಸ್ಥೆ ಇಲ್ಲದ್ದರಿಂದ ಕೊಪ್ಪದ ಆಸ್ಪತ್ರೆಗೆ ಹೋಗಿ ಎಂದು ಸೂಚಿಸಿದರು ಕಾರಣ ಇಲ್ಲಗೆ ಬಂದೆವೆಂದು ಹೇಳಿದರು.

4. ನಾಗರತ್ನ ಇವರನ್ನು ಹೆರಿಗೆ ಕೋಣೆಗೆ ನರ್ಸುಗಳ ಸಹಾಯದಿಂದ ಕರೆದೊಯ್ದು, ಪರಿಕ್ಷೀಸಿದಾಗ ಭ್ರೂಣ ಹೊರಗಡೆ ಬರುತ್ತಿತ್ತು, ರಕ್ತಸ್ರಾವವಾಗುತ್ತಿತ್ತು,

ಭ್ರೂಣ ಹೊರಗಡೆ ಬಂದಿತು, ನಾನು ಸೂಕ್ತ ಚಿಕಿತ್ಸೆಯನ್ನು ಅಂದರೆ ರಕ್ತಸ್ರಾವ ನಿಲ್ಲಲು ಮತ್ತು ನೋವು ಕಡಿಮೆಯಾಗಲು ಚಿಕಿತ್ಸೆ ಕೊಟ್ಟೆನು. ರಕ್ತ ಪರೀಕ್ಷೆ ಮಾಡಿದಾಗ ನಾಗರತ್ನ ಇವರಿಗೆ ಕಡಿಮೆ ಇತ್ತು. ನಮ್ಮ ಆಸ್ಪತ್ರೆಯಲ್ಲಿ, ಅವರಿಗೆ ಬೇಕಾದ ಒಂದು ಬಾಟಲ್ ರಕ್ತ ಮಾತ್ರ ಇತ್ತು, ಅದನ್ನು ಕೊಡಲಾಯಿತು. ನಾಗರತ್ನ ಇವರು ಚೇತರಿಸಿಕೊಂಡರು. ಬಿಪಿ ಮತ್ತು ನಾಡಿ ಸಹಜವಾಗಿ ಇತ್ತು.

5. ಮಾರನೇ ದಿನದವರೆಗೂ ನಾಗರತ್ನ ಇವರು ಚೆನ್ನಾಗಿಯೇ ಇದ್ದರು. ನಂತರ ರಕ್ತಸ್ರಾವ ಪ್ರಾರಂಭವಾಯಿತು. ಬಿಪಿ ಕಡಿಮೆಯಾಯಿತು, ಈ ಕಾರಣದಿಂದ ನಮ್ಮಲ್ಲಿ ಸರಿಯಾದ ವ್ಯವಸ್ಥೆ ಇಲ್ಲ ಎಂದು ಶಿವಮೊಗ್ಗದ ಆಸ್ಪತ್ರೆಗೆ ರೆಫರ್ ಮಾಡಲಾಯಿತು.

6. ನಾಗರತ್ನ ಇವರು ನಮ್ಮ ಆಸ್ಪತ್ರೆಗೆ ದಾಖಲಾದ ಬಗ್ಗೆ ಕೇಸು ಶೀಟಿನ ಎಕ್ಸಾಟ್ರಕ್ಟ ಇರುತ್ತದೆ(ಆ ದಾಖಲೆಯ ಮೇಲೆ case sheet duplicate ಎಂದು ಬರೆದಿದ್ದು, duplicate ಎಂದು ಬರೆದಿರುವುದು extract ಎನ್ನುವ ಬದಲು, ಎಂದು ಸಾಕ್ಷಿದಾರರು ಹೇಳಿರುತ್ತಾರೆ). ದಾಖಲೆಯನ್ನು ನಿಶಾನೆ ಪಿ.18 ಎಂದು ಗುರುತಿಸಲಾಯಿತು.

7. ನಾಗರತ್ನ ಅವರು ನಮ್ಮ ಆಸ್ಪತ್ರೆಯಲ್ಲಿ ದಾಖಲಾದಾಗಿನಿಂದ ಶಿವಮೊಗ್ಗ ಆಸ್ಪತ್ರೆಗೆ ದಾಖಲಾಗುವವರೆಗೂ ಏನೇನಾಯಿತು ಎಂದು ಬರೆದುಕೊಡಿ ಎಂದು ಪೋಲೀಸರು ಕೇಳಿದ್ದರು. ಆ ಬಗ್ಗೆ ಬರೆದುಕೊಟ್ಟ ದಾಖಲೆ ಇದೇ ಇರುತ್ತದೆ. ಅದನ್ನು ನಿಶಾನೆ ಪಿ.19 ಎಂದು, ಅದರಲ್ಲಿರುವ ಸಾಕ್ಷಿದಾರರ ಸಹಿಯನ್ನು ನಿಪಿ.19(ಎ) ಎಂದು ಗುರುತಿಸಲಾಯಿತು.

8. (ಈ ಸಮಯದಲ್ಲಿ ಮಾನ್ಯ ಪಿ.ಪಿ.ಯವರು ಅಸಲು ರಿಜಿಸ್ಟರನ್ನು ತರಿಸಬೇಕಾಗಿರುತ್ತದೆಂದು ಮುಂದಿನ ಮುಖ್ಯ ವಿಚಾರಣೆಗೆ ಸಮಯ ಬೇಕೆಂದು, ಸಮಯ ಕೇಳಿರುತ್ತಾರೆ, ಮುಂದಿನ ಮುಖ್ಯ ವಿಚಾರಣೆಗಾಗಿ ಮುಂದೂಡಲಾಯಿತು)

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

**ಓ.ಹೇ.ಕೇ.ಸ.ಇ.ಎ.ಒ.**

**Sd/-**
**(ಶುಭ ಗೌಡರ್)**
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಚಿಕ್ಕಮಗಳೂರು.**

ಸಾಕ್ಷಿ ಸಹಿಃ-

Visit **ecourts.gov.in** for updates or download mobile app "**eCourts Services**" from Android or iOS